ಶ್ರೀ ಕೆ.ಎಂ.ಕೃಷ್ಣಮೂರ್ತಿ : ಮಾನ್ಯ ಅಧ್ಯಕ್ಷರೆ,, ನಾನು ಈದ ಬಾರಿ ಬೇವಿನಹಳ್ಳಿಗೆ ಮರುವೆಗೆಂದು ಹೋಗಿದ್ದೆ, ಅಲ್ಲಿನ ರೈತರು ನಮಗೆ ಅನ್ಯಾಯವಾಗಿದೆ ಎಂದು ಮನವಿಯನ್ನು ಕೊಟ್ಟಿದ್ದಾರೆ.

ಅಧ್ಯಕ್ಷರು : ಮಾನ್ಯ ಮಂತ್ರಿಯವರು ಅನ್ಯಾಯವಾಗಿದ್ದರೆ ಸರಿಪಡಿಸುತ್ತೇವೆಂದು ಹೇಳಿದ್ದಾರೆ.

(ಉತ್ತರ ಪಟ್ಟಿಯನ್ನು ಲಗತ್ತಿಸಿದೆ)

ಕೃಷ್ಣಮೇಲ್ದಂಡೆ ಯೋಜನೆಯ ಬಲದಂಡೆ ಕಾಲುವೆ ಕಾಮಗಾರಿ

148 (1255) ಶ್ರೀ ಸಂಜಯ್ಯನಮಠ ಎಸ್.ಜಿ. (ಗುಳ್ಳೇದಗುಡ್ಡ) : ಮಾನ್ಯ ಭಾರಿ ಮತ್ತು ಮಧ್ಯಮ ನೀರಾವರಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವವರೆ?

ಅ) ಕೃಷ್ಣ ಮೇಲ್ದಂಡೆ ಯೋಜನೆಯ ಬಲದಂಡೆ ಕಾಲುವೆ ಒಟ್ಟು ಎಷ್ಟು ಕಿಮೀ. ನಿರ್ವಹಿಸಬೇಕಾಗಿದೆ, ಅದರಲ್ಲೆ ಹಾಲಿ (ಈಗ) ಎಷ್ಟು ಕಿಮೀ, ಪೂರ್ಣಗೊಳಿಸಲಾಗಿದೆ;

ಆ) ಉದ್ದೇಶಿತ ಕಾಮಗಾರಿಯನ್ನು ಪೂರ್ಣಗೊಳಿಸಲು ಬೇಕಾಗುವ ಕಾಲಾವಧಿ ಎಷ್ಟು (ಸಂಪೂರ್ಣವಾಗಿ ನಿರ್ಮಿಸಲು ಎಷ್ಟು ಕಾಲಾವಧಿಬೇಕು) ನಿಗಧಿತ ಕಾಲಾವದಿ ಎಷ್ಟು (ಯಾವುದು) ಅವಶ್ಯಕ ಹಣಕಾಸಿನ ವ್ಯವಸ್ಥೆ ಮಾಡಲಾಗಿದೆಯೇ?

ಶ್ರೀ ಹೆಚ್.ಕೆ.ಪಾಟೀಲ್ (ಭಾರಿ ಮತ್ತು ಮಧ್ಯಮ ನೀರಾವರಿ ಸಚಿವರು)

ಅ) ಕೃಷ್ಣ ಮೇಲ್ದಂಡೆ ಯೋಜನೆಯಡಿಯಲ್ಲಿ ಸ್ಕೀಂ 'ಎ' ನಲ್ಲಿ ನಾರಾಯಣಪುರ ಬಲದಂಡೆ ಕಾಲುವೆಯನ್ನು 95 ಕಿಲೋ ಮೀಟರ್ ರವರೆಗೆ ಹಾಗೂ ಆಲಮಟ್ಟಿ ಬಲದಂಡೆ ಕಾಲುವೆ ಯನ್ನು ಕಿಮೀ67 ರವರೆಗೆ ನಿರ್ಮಿಸಬೇಕಾಗಿದೆ.

ಇದರಲ್ಲಿ ನಾರಾಯಣಪುರ ಬಲದಂಡೆ ಕಾಲುವೆಯ ಕಿಮೀ0 ದಿಂದ 18 ವರೆಗಿನ ಕಾಮಗಾರಿಯು ಪೂರ್ಣಗೊಂಡಿರುತ್ತದೆ. ಕಿಮೀ 19 ರಿಂದ 78 ರವರೆಗಿನ ಕಾಮಗಾರಿಗಳು ಪೂರ್ಣಗೊಳ್ಳುವ ಹಂತದಲ್ಲಿದೆ. ಕಿಮೀ 79 ರಿಂದ 95ರ ವರೆಗಿನ ಕಾಮಗಾರಿಗಳನ್ನು ಕೈಗೊಳ್ಳಲಾಗಿದ್ದು, ಇವುಗಳು ಪ್ರಗತಿಯಲ್ಲಿವೆ.

ಆಲಮಟ್ಟಿ ಬಲದಂಡೆ ಕಾಲುವೆಗೆ ಸಂಬಂಧಿಸಿದ ಮಿತ ನೀರಾವರಿ ಯೋಜನೆಯ ಮುಖ್ಯ ಸ್ಥಾವರದ ಮತ್ತು ಪಂಪ್‌ಗಳನ್ನು ಅಳವಡಿಸುವ ಕೆಲಸಗಳು ಪೂರ್ಣಗೊಳ್ಳುವ ಹಂತದಲ್ಲಿವೆ.

0 ದಿಂದ 5 ಕಿಲೋ ಮೀಟರ್‌ವರೆಗಿನ ಕಾಲುವೆ ಕೆಲಸ ಪ್ರಗತಿಯಲ್ಲಿದ್ದು, ಮಾರ್ಚ್ 2001 ರಲ್ಲಿ ಪೂರ್ಣಗೊಳ್ಳಲಿದೆ. ಕಿಮೀ. 5 ರಿಂದ 27 ರವರೆಗಿನ ಕಾಲುವೆಗೆ ಸಂಬಂಧಿಸಿದ ಸರ್ವೆ ಕಾರ್ಯ ಮುಗಿದಿದ್ದು, ಅಂದಾಜು ತಯಾರಿಸಲಾಗುತ್ತಿದೆ ಮತ್ತು ಕಿಮೀ. 5 ರಿಂದು 14ರವರೆಗಿನ ಕೆಲಸಕ್ಕೆ ಟೆಂಡರ್‌ಗಳನ್ನು ಸ್ವೀಕರಿಸಲಾಗಿದ್ದು ಇದನ್ನು ಪರಿಶೀಲಿಸಲಾಗುತ್ತಿದೆ. ಕಿಮೀ 28 ರಿಂದ 67 ರವರೆಗಿನ ಕಾಲುವೆಯ ಸರ್ವೆ ಕಾರ್ಯ ಪ್ರಗತಿ ಯಲ್ಲಿದ್ದು, ಏಪ್ರಿಲ್ 2001 ರಲ್ಲಿ ಪೂರ್ಣಗೊಳಿಸಲು ಉದ್ದೇಶಿಸಲಾಗಿದ್ದು, ನಂತರ ಅಂದಾಜುಗಳನ್ನು ತಯಾರಿಸಿ ಟೆಂಡರ್‌ಗಳನ್ನು ಕರೆಯಲಾಗುವುದು.

ಆ) ಆಲಮಟ್ಟಿ ಬಲದಂಡೆ ಕಾಲುವೆ ಹಾಗೂ ನಾರಾಯಣಪುರ ಎಡದಂಡೆ ಕಾಲುವೆ ಕಾಮಗಾರಿಗಳು ಹಾಗೂ ಇದರಡಿಯಲ್ಲಿ ಬರುವ ವಿತರಣಾ ಕಾಲುವೆ ಇತ್ಯಾದಿಗಳನ್ನು ಡಿಸೆಂಬರ್ 2002 ರಲ್ಲಿ ಪೂರ್ಣಗೊಳಿಸಲು ಕಾರ್ಯಕ್ರಮ ಹಾಕಿಕೊಳ್ಳಲಾಗಿದೆ. ಕೃಷ್ಣ ಭಾಗ್ಯ ಜಲ ನಿಗಮ ನಿಯಮಿತವು ಈ ಕಾಮಗಾರಿಗಳಿಗೆ ಬೇಕಾಗುವ ಹಣಕಾಸಿನ ವ್ಯವಸ್ಥೆ ಮಾಡುತ್ತಿದೆ.

ಶ್ರೀ ಎಸ್. ಜಿ. ನಂಜಯ್ಯನಮಠ್ : ಮಾನ್ಯ ಅಧ್ಯಕ್ಷರೆ, ಆಲಮಟ್ಟಿ ಬಲದಂಡೆ ಕಾಲುವೆ ಅಗತದ ಕೆಲಸ ಇದೇ ವರ್ಷ ಪ್ರಾರಂಭವಾಗಿದೆ. ಕಳೆದ ಮೂವತ್ತು ವರ್ಷಗಳಿಂದ ಈ ಡ್ಯಾಮ್ ಕೆಲಸ ಮುಗಿದು ಗೇಟ್ ಹಾಕುವಂತಹ ಕೆಲಸಕ್ಕೆ ಬಂದರೂ ಇನ್ನು ಸರ್ವೆ ಕೆಲಸವಾಗಿರಲಿಲ್ಲ. ಆಗ ಮಾನ್ಯ ಸಚಿವರು ಸರ್ಕಾರದಿಂದ ಈ ಸರ್ವೆ ಕೆಲಸ ತಡವಾಗಬಹುದೆಂದು ಇದನ್ನು ಖಾಸಗಿಯವರಿಗೆ ವಹಿಸಿ ಈ ಕೆಲಸ ಪೂರ್ತಿಯಾಗಿದೆ. ಈಗ ಜನರ ಇಚ್ಛೆ ಏನೆಂದರೆ ಇದ ತಡಮಾಡದೇ ಕೆಲಸವನ್ನು ವೇಗದಲ್ಲಿ ಮುಗಿಸಿ ಕಾಲುವೆಯಲ್ಲಿ ನೀರು ಹರಿದು ಬರಬೇಕು. ಅದರ ಉಪಯೋಗವನ್ನು ಮಾಡಿಕೊಳ್ಳಬೇಕೆಂಬುದು ಆಗಿದೆ. ಆದುದರಿಂದ ಮಾನ್ಯ ಸಚಿವರು ಇದರ ಬಗ್ಗೆ ಹೆಚ್ಚಿನ ಆಸಕ್ತಿಯನ್ನು ವಹಿಸಿ ಈ ಬಲದಂಡೆ ಕಾಲುವೆಯ 67 ಕಿ.ಮೀ. ಕೆಲಸವನ್ನು ಶೀಘ್ರವಾಗಿ ಮುಗಿಸುವಂತಹ ಸ್ಥಿತಿಗೆ ತರಬೇಕೆಂದು ಜನರ ಆಸೆಯಾಗಿದೆ. ಈ ವಿಚಾರವನ್ನು ಮಾನ್ಯ ಅಧ್ಯಕ್ಷರ ಮುಖಾಂತರ ಮಾನ್ಯ ಮಂತ್ರಿಯವರ ಗಮನಕ್ಕೆ ತರುತ್ತಿದ್ದೇನೆ.

ಶ್ರೀ ಹೆಚ್. ಕೆ. ಪಾಟೀಲ್ : ಮಾನ್ಯ ಅಧ್ಯಕ್ಷರೆ, ಸರ್ಕಾರದ ಉದ್ದೇಶ ಕೂಡ ಆಲಮಟ್ಟಿ ಬಲದಂಡೆ ಕಾಲುವೆಯನ್ನು ಎಷ್ಟು ಬೇಗ ಮುಗಿಸಲು ಸಾಧ್ಯವಿದೆಯೋ, ಅಷ್ಟು ಬೇಗ ಮುಗಿಸಬೇಕೆಂದು, ನಾವು ಎಲ್ಲಾ ರೀತಿಯಲ್ಲೂ ಪ್ರಯತ್ನ ಮಾಡುತ್ತಿದ್ದೇವೆ.

ಶ್ರೀ ಪಿ. ಹೆಚ್. ಪೂಜಾರ್ : ಮಾನ್ಯ ಅಧ್ಯಕ್ಷರೆ, ಈಗಾಗಲೇ ಶ್ರೀ ನಂಜಯ್ಯನವರು ಹೇಳಿದ ಹಾಗೆ ಆಲಮಟ್ಟಿ ಬಲದಂಡೆ ಹಾಗೂ ನಾರಾಯಣಪುರ ಬಲದಂಡೆ ಕಾಲುವೆಗಳ ಕಾರ್ಯ ತ್ವರಿತಗತಿಯಲ್ಲಿ ನಡೆಯುತ್ತಿದೆ. ನಾನು ತಮ್ಮ ಮುಖಾಂತರ ಮಾನ್ಯ ಮಂತ್ರಿಯವರಲ್ಲಿ ಏನಂತಿ ಮಾಡಿಕೊಳ್ಳುವುದೇನೆಂದರೆ ಬಾಗಲಕೋಟೆ ತಾಲ್ಲೂಕಿನ 35 ಹಳ್ಳಿಗಳು ಮುಳುಗಡೆಯಾಗಿರುವಂಥಾದ್ದು, ಹಾಗೂ ಬಾಗಲಕೋಟೆ ನಗರ ಮುಳುಗಡೆಯಾಗಿರುವಂಥಹ ಸಂದರ್ಭದಲ್ಲಿ ಆಲಮಟ್ಟಿ ಬಲದಂಡೆಯ ಅಲೈನ್‌ಮೆಂಟ್ ಅನ್ನು ಬದಲಾವಣೆ ಮಾಡಿದರೆ ಬಾಗಲಕೋಟೆ ತಾಲ್ಲೂಕಿನ ಸುಮಾರು 15 ಹಳ್ಳಿಗಳಿಗೆ ನೀರಿನ ಸೌಲಭ್ಯವನ್ನು ಒದಗಿಸುವುದಕ್ಕೆ ಅನುಕೂಲವಾಗುತ್ತದೆ. ಈ ವಿಚಾರವನ್ನು ಕೆ. ಬಿ. ಚೇರ್ಮನ್‌ರವರೊಡನೆಯೂ ಮಾತನಾಡಿದ್ದೇನೆ. ಅದಕ್ಕೆ ಅವರು ಸಹ ಪರಿಶೀಲನೆ ಮಾಡುವಂತಹ ಕಾರ್ಯಕ್ರಮವನ್ನು ಹಾಕಿಕೊಂಡಿದ್ದರು. ಆದುದರಿಂದ ಈ ಸರ್ವೆ ಕೆಲಸದಲ್ಲಿ ಇದನ್ನು ಸೇರಿಸಿಕೊಂಡರೆ ಬಾಗಲಕೋಟೆ ತಾಲ್ಲೂಕಿನ ಬೆನಕಟ್ಟಿ, ಭಗವತಿ, ಇನ್ನಿತರ ಹತ್ತು ಹಳ್ಳಿಗಳಿಗೆ ನೀರಿನ ಸೌಲಭ್ಯವನ್ನು ಒದಗಿಸುವಂತಹ ಕೆಲಸವಾಗುತ್ತದೆ. ಆದುದರಿಂದ ತಾವು ದಯಮಾಡಿ ಇದರ ಬಗ್ಗೆ ಏನು ಕ್ರಮ ತೆಗೆದುಕೊಳ್ಳುತ್ತೀರೆಂಬುದನ್ನು ಹೇಳಬೇಕು, ಮತ್ತು ಆಲಮಟ್ಟಿ ಬಲದಂಡೆ ಕೆಲಸ ಮುಗಿಯುವವರೆಗೆ ಜಲಾಶಯದಲ್ಲಿ ನೀರು ನಿಲ್ಲಿಸಲಾಗುವುದೇ, ಇಲ್ಲವೇ? ಎಂಬುದನ್ನು ತಿಳಿಸಬೇಕು.

ಶ್ರೀ ವಿಶ್ವೇಶ್ವರ ಹೆಗಡೆ ಕಾಗೇರಿ : ಮಾನ್ಯ ಅಧ್ಯಕ್ಷರೆ, ಮಾನ್ಯ ನಂಜಯ್ಯಮಠನವರೇ, ಕಾಡಾ ಚೇರ್ಮನ್ ಆಗಿದ್ದಾರೆ. ಅವರೇ ಮಾಡುವಂತಹ ಕೆಲಸಕ್ಕೆ ಇಲ್ಲಿ ಪ್ರಶ್ನೆಯನ್ನು ಕೇಳಬಹುದೇ?

ಅಧ್ಯಕ್ಷರು : ಅವರು ಎಂ.ಎಲ್.ಎ. ಆಗಿರುವುದರಿಂದ ಪ್ರಶ್ನೆಯನ್ನು ಕೇಳುವುದಕ್ಕೆ ಹಕ್ಕಿದೆ.

ಶ್ರೀ ಹೆಚ್.ಕೆ.ಪಾಟೀಲ್ : ಮಾನ್ಯ ಅಧ್ಯಕ್ಷರೆ, ಮಾನ್ಯ ವಿಶ್ವೇಶ್ವರ ಹೆಗಡೆ ಯವರಿಗೆ ಮಾಹಿತಿಗಾಗಿ ಹೇಳುವುದೇನೆಂದರೆ ಮಾನ್ಯ ಸದ್ಯರಿಗೆ ಫೀಲ್ಡ್ ಲೆವಲ್ ಚಾನಲ್ ಮಾಡುವಂತಹ ಅಧಿಕಾರವಿದೆ, ಈ ಕಾಲುವೆ ಡಿಸ್ಟ್ರಿಬ್ಯೂಟರ್ ಮಾಡುವಂತಹ ಅಧಿಕಾರವನ್ನು ಇನ್ನು ಕಾಡಾಕ್ಕೆ ಕೊಟ್ಟಿಲ್ಲ. ಇನ್ನು ಸನ್ಮಾನ್ಯ ಪೂಜಾರ್‌ರವರು ಕೇಳಿರುವಂತಹ ವಿಚಾರವಾಗಿ ನಾವು ಮತ್ತು ಅವರು ಸಾಕಷ್ಟು ಸಾರಿ ವಿಚಾರ ವಿನಿಮಯ ಮಾಡುತ್ತೇವೆ. ಇವರು ಆಲಮಟ್ಟಿ ಬಲದಂಡೆ ಕಾಲುವೆ ಅಲೈನ್‌ಮೆಂಟ್ ಬದಲಾವಣೆ ಮಾಡುವುದರಿಂದ ಅನುಕೂಲವಾಗುತ್ತದೆಂದು ಹೇಳಿದ್ದಾರೆ. ಇದು ಇನ್ನು ನನ್ನ ಗಮನಕ್ಕೆ ಬಂದಿಲ್ಲ, ಇದರಿಂದ ಅನುಕೂಲವಾಗುತ್ತಿಯೇ? ಎಂದು ಸಂಬಂಧಪಟ್ಟಂತಹ ತಾಂತ್ರಿಕ ತಜ್ಞರೊಡನೆ ಮಾತನಾಡುತ್ತೇನೆ. ಈಗಾಗಲೇ ಈ ಕಾಲುವೆಯ ಕೆಲಸವೂ ಪ್ರಾರಂಭ ವಾಗಿದೆ. ಅಕ್ವಿಡಕ್ಟ ಸಹ ಪೂರ್ಣವಾಗುತ್ತಿದೆ, ಇದರ ಬಗ್ಗೆ ತಾವು ಪೂರ್ಣ ವಿವರಗಳನ್ನು ಕಳುಹಿಸಿಕೊಡಿ, ಇದು ಅನುಕೂಲವಾಗುತ್ತದೆಯೇ? ಎಂಬ ಬಗ್ಗೆ ಪರಿಶೀಲನೆ ಮಾಡಿ ಅವಶ್ಯಕ ಕ್ರಮವನ್ನು ತೆಗೆದುಕೊಳ್ಳುತ್ತೇನೆ.

ಸುಜಾತ ಟಾಕೀಸ್ ಎದುರು ಪಾದಚಾರಿಗಳ ಸುರಂಗ ಮಾರ್ಗದ ಕಾಮಗಾರಿ

149 (1220) ಶ್ರೀ ದಿನೇಶ್ ಗುಂಡೂರಾವ್ ಗಾಂಧಿನಗರ : ಮಾನ್ಯ ಮುಖ್ಯಮಂತ್ರಿಯವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಸುಜಾತಾ ಟಾಕೀಸ್ ಎದುರು (ರಾಜಾಜಿನಗರ - ಬೆಂಗಳೂರು ಬಸ್ ನಿಲ್ದಾಣದ ರಸ್ತೆ) ವಾಹನ ದಟ್ಟಣೆ ಹೆಚ್ಚಾಗಿರುವುದರಿಂದ ಪಾದಚಾರಿಗಳ ಸುರಂಗ ಮಾರ್ಗ ನಿರ್ಮಿಸಲು ಉದ್ದೇಶಿಸಿರುವುದು ನಿಜವಲ್ಲವೇ?

ಆ) ಪ್ರಸ್ತುತ ಈ ಯೋಜನೆಯು ಯಾವ ಹಂತದಲ್ಲಿದೆ; ಈ ಕಾಮಗಾರಿಗಳನ್ನು ಎಂದು ಆರಂಭಿಸಲಾಗುವುದು?

ಇ) ಈ ಯೋಜನೆಯನ್ನು ರಾಜಾಜಿನಗರ ಕಾರಿಡಾರ್ ಯೋಜನೆಗೆ ಸೇರಿಸುವ ಉದ್ದೇಶ ಸರ್ಕಾರಕ್ಕಿದೆಯೇ?

ಈ) ಹಾಗಿದ್ದಲ್ಲಿ ಈ ಯೋಜನೆಯನ್ನು ಎಂದಿನಿಂದ ಆರಂಭಿಸಲಾಗುವುದು ?

ಶ್ರೀ ಎಸ್. ಎಂ.ಕೃಷ್ಣ (ಮುಖ್ಯಮಂತ್ರಿಗಳು)

ಅ) ಹೌದು

ಆ) ಈಯೋಜನೆಯನ್ನು ವಾಹನಗಳ ಸಂಚಾರಕ್ಕೆ ತೊಂದರೆಯಾಗದಂತೆ ಅಧುನಿಕ ರೀತಿಯಲ್ಲಿ ಅಂದರೆ, ಬಾಕ್ಸ್ ಜಾಕಿಂಗ್ ಮಾದರಿಯಲ್ಲಿ ನಿರ್ಮಿಸಲು ಭಾರತೀಯ ವಿಜ್ಞಾನ ಸಂಸ್ಥೆಯ ಸಿವಿಲ್ ಇಂಜಿನಿಯರಿಂಗ್ ವಿಭಾಗದ ತಜ್ಞರಿಗೆ ವಹಿಸಲು ಪ್ರಸ್ತಾಪಿಸಲಾಗಿದೆ. ಈ ಸಂಬಂಧ ಈ ಕಾಮಗಾರಿಯನ್ನು ಕೈ ಗೆತ್ತಿಕೊಳ್ಳಲು ವಿವರವಾದ ಯೋಜನಾ ವರದಿಯನ್ನು ತಯಾರಿಸಲು ಭಾರತೀಯ ವಿಜ್ಞಾನ ಸಂಸ್ಥೆಯನ್ನು ಕೋರಲಾಗಿದೆ. ಸಂಸ್ಥೆಯು ವಿವರವಾದ ಯೋಜನಾ ವರದಿ ಸಲ್ಲಿಸಿದ ನಂತರ ಕಾಮಗಾರಿಯನ್ನು ಪ್ರಾರಂಭಿಸುವ ಬಗ್ಗೆ ತೀರ್ಮಾನಿಸಲಾಗುವುದು.